ದಿನಾಂಕ ಃ 09.01.2025
ಆರ್.ಎ಼ 43/2024
ಪಿ.ಡಬ್ಲ್ಯೂ: 1

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು ಃ ಎದುರುದಾರರ ಪರ ವಕೀಲರಾದ ಶ್ರೀ ಡಿ.ಕೆ.ಪಿ. ರವರಿಂದ ಃ</u>**

2018 ನೇ ಇಸವಿಯಲ್ಲಿ ನೀವು ಹಳಿಕೊಪ್ಪ ರಸ್ತೆ, ಸತ್ಯಗ್ರಹ ಸೌದ, ಶಿವಪುರ, ಮದ್ದೂರು ಟೌನ್ ಈ ವಿಳಾಸದಲ್ಲಿ ವಾಸವಿದ್ದಿರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಈ ವಿಳಾಸಕ್ಕೆ ನಿಮಗೆ 2018 ರ 7 ನೇ ತಿಂಗಳಿನಲ್ಲಿ ನ್ಯಾಯಾಲಯದಿಂದ ನಿಮಗೆ ಅಂಚೆ ಮುಖೇನ ಒಂದು ನೋಟಿಸ್ ಬಂದಿತ್ತು ಎಂದರೆ ಸಾಕ್ಷಿ ಬಂದಿಲ್ಲ ಎಂದು ಉತ್ತರಿಸುತ್ತಾರೆ. ಆ ನೋಟೀಸ್‌ಅನ್ನು ನೀವು ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. 2018 ನೇ ಇಸವಿಯಲ್ಲಿಯೇ ಮನೋಜ್ ಕುಮಾರ್ ಅವರು ನಿಮ್ಮ ವಿರುದ್ಧ ಕೇಸು ದಾಖಲಿಸಿರುವ ವಿಚಾರ ನಿಮಗೆ ಗೊತ್ತಿತ್ತು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಕೇಸಿನ ಡಿಕ್ರಿಯಾದ ನಂತರ ಮನೋಜ್ ಕುಮಾರ್ ಅವರು ನಿಮ್ಮ ವಿರುದ್ಧ ಡಿಕ್ರಿ ಹಣದ ವಸೂಲಿಗಾಗಿ ಜಾರಿ ಪ್ರಕರಣವನ್ನು ಹಾಕಿದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಈ ಜಾರಿ ಪ್ರಕರಣದಲ್ಲಿ 2019 ನೇ ಇಸವಿಯಲ್ಲಿ ನಾನು ನನ್ನ ವಕೀಲರನ್ನು ನೇಮಿಸಿಕೊಂಡಿದ್ದೇನೆ. ಆ ಜಾರಿ ಪ್ರಕರಣದಲ್ಲಿ ನಮ್ಮ ವಕೀಲರ ಮೂಲಕ ಹಾಜರಾದ ನಂತರ ಯಾವ ಕಾರಣಕ್ಕಾಗಿ ಆ ಜಾರಿ ಪ್ರಕರಣ ಹಾಕಲಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಏನು ವಿಚಾರವಾಗಿ ಮನೋಜ್ ಅವರು ಆ ಜಾರಿ ಪ್ರಕರಣ ಹಾಕದ್ದರು ಎಂದು ತಿಳಿದುಕೊಂಡಿದ್ದೀರಿ ಎಂದರೆ ಸಾಕ್ಷಿ ಮರೆತುಹೋಗಿದೆ ಎಂದು ಉತ್ತರಿಸುತ್ತಾರೆ. ನೀವು ಆ ಜಾರಿ ಪ್ರಕರಣದಲ್ಲಿ ವಕೀಲರನ್ನು ನೇಮಿಸಿಕೊಂಡ ನಂತರವು ಹಲವಾರು ನೋಟೀಸುಗಳು ಆ ಪ್ರಕರಣದಲ್ಲಿ ನಿಮಗೆ ಬಂದಿವೆ ಎಂದರೆ ಸಾಕ್ಷಿ ಬಂದಿಲ್ಲ ಎಂದು ಉತ್ತರಿಸುತ್ತಾರೆ. ಆ ಜಾರಿ ಪ್ರಕರಣದಲ್ಲಿ ನಿಮಗೆ 2022 ರಲ್ಲಿಯು ನ್ಯಾಯಾಲಯದಿಂದ ಕಳುಹಿಸಿದ ಒಂದು ನೋಟೀಸ್ ನಿಮಗೆ ಖುದ್ದು ಜಾರಿಯಾಗಿದೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಮನೋಜ್ ಕುಮಾರ್ ಅವರು ನಿಮ್ಮ ವಿರುದ್ಧ ಹಣ ವಸೂಲಿಗಾಗಿ ದಾವೆ ಸಲ್ಲಿಸಿ ಡಿಕ್ರಿ ಆದ ವಿಚಾರ ನಿಮಗೆ ಗೊತ್ತಿತ್ತು ಎಂದರೆ ಸಾಕ್ಷಿ 2019 ರಲ್ಲಿ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. 2019 ರಲ್ಲಿಯೇ ನೀವು ಡಿಕ್ರಿಯನ್ನು ಪ್ರಶ್ನಿಸಿ ಅಪೀಲು ಸಲ್ಲಿಸಲು ತೊಂದರೆ ಏನಾದರು ಇತ್ತಾ ಎಂದರೆ ಸಾಕ್ಷಿ ತೊಂದರೆ ಏನು ಇರಲಿಲ್ಲ ನನ್ನ ವಕೀಲರಿಗೆ ಕೊಟ್ಟಿದ್ದೆ ಅವರು ಹಾಕಿಲ್ಲ ಎಂದು ಉತ್ತರಿಸುತ್ತಾರೆ. ನೀವು ನಿಮ್ಮ ವಕೀಲರಿಗೆ ಕೊಟ್ಟಿದ್ದೆ ಎಂದು ಹೇಳುತ್ತಿದ್ದೀರಿ ಅವರು ಅಪೀಲು ಹಾಕಿದ್ದಾರೋ ಇಲ್ಲವೋ ಎಂದು ಫಾಲೋಪ್ ಮಾಡಿದ್ದೀರ ಎಂದರೆ ಸಾಕ್ಷಿ ಮಾಡುತ್ತಿದ್ದೆ ಪೋಲೀಸರು ಮನೆಗೆ ಬರುವವರೆಗು ನನಗೆ ಗೊತ್ತಾಗಲಿಲ್ಲ ಎಂದು ಉತ್ತರಿಸುತ್ತಾರೆ. ಪೋಲಿಸರು ಈ ಪ್ರಕರಣಕ್ಕೆ ಸಂಬಂದಿಸಿದಂತೆ ನ್ಯಾಯಾಲಯದ ಆದೇಶದ ಮೇರೆಗೆ ಯಾವುದೇ ಕಾಲಕ್ಕೂ ನಿಮ್ಮ ಮನೆಯ ಹತ್ತಿರ ಬಂದಿಲ್ಲ ಎಂದರೆ ಸಾಕ್ಷಿ ಬಂದಿರುತ್ತಾರೆ ಎಂದು ಉತ್ತರಿಸುತ್ತಾರೆ. ನೀವು ಈ ಮೇಲೆ ಹೇಳಿದಂತೆ ನಮ್ಮ ವಕೀಲರಿಗೆ ಅಪೀಲು ಸಲ್ಲಿಸಲು ಕೊಟ್ಟಿದ್ದೆ ನಂತರ ಪೋಲೀಸರು ಮನೆಯ ಬರುವವರೆಗು ನನಗೆ ಗೊತ್ತಾಗಲಿಲ್ಲ ಎಂದು ಈ

ಪ್ರಕರಣವನ್ನು ಸಲ್ಲಿಸಲು ಸೃಷ್ಟಿಸಿದ್ದೀರಿ ಎಂದರೆ ಸಾಕ್ಷಿ ಪೋಲೀಸರು ಬಂದಿದ್ದರು ಎಂದು ಉತ್ತರಿಸುತ್ತಾರೆ. ಪೋಲೀಸರು ನಿಮ್ಮ ಮನೆಯ ಬಂದಿದ್ದರು ಎಂದು ನೀವು ಹೇಳುತ್ತಿದ್ದೀರಿ ಅವರು ಯಾವ ಪ್ರಕರಣದ ವಿಚಾರವಾಗಿ ಬಂದಿದ್ದರು ಎಂದು ಕೇಳಿ ತಿಳಿದುಕೊಂಡ್ಡೀರ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ಯಾವ ಕೇಸ್ ನಂಬರ್ ವಿಚಾರವಾಗಿ ಪೋಲೀಸರು ಬಂದಿದ್ದರು ಎಂದರೆ ಸಾಕ್ಷಿ ಕೇಸ್ ನಂಬರ್ ಮರೆತುಹೋಗಿದೆ ಮನೋಜ್ ಕುಮಾರ್ ಅವರ ಕೇಸಿಗಾಗಿ ಬಂದಿದ್ದರು ಎಂದು ಉತ್ತರಿಸುತ್ತಾರೆ. ಪೋಲೀಸರು ನಿಮ್ಮ ಮನೆಯ ಬಳಿ ಬಂದಿದ್ದರು ಎಂದು ಹೇಳುವುದಕ್ಕೆ ಸಂಬಂದಪಟ್ಟ ದಾಖಲಾತಿಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದೀರ ಎಂದರೆ ಸಾಕ್ಷಿ ಹಾಜರು ಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನೀವು ಯಾವುದೇ ಪೂರಕ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಆದರೂ ಸುಳ್ಳು ಹೇಳುತ್ತಿದ್ದೀರಿ ಎಂರದೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. 2019 ರ ವೇಳೆ ಮನೋಜ್ ಕುಮಾರ್ ಅವರು ನಿಮ್ಮ ವಿರುದ್ದ ಹಣ ವಸೂಲಿಗಾಗಿ ದಾಖಲಿಸಿದ್ದ ಕೇಸ್ ವಿಚಾರ ಗೆತ್ತಿದ್ದರೂ ಸಹ ನೀವು ಅವರಿಗೆ ಹಣವನ್ನು ಕೊಡಬೇಕಾಗುತ್ತದೆ ಎಂಬ ದುರುದ್ದೇಶದಿಂದ ಹಾಗು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ರೀತಿ ಸುಳ್ಳು ಕೇಸ್ ಹಾಕಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಈಗ ತೋರಿಸಿದ ದಾಖಲಾತಿ ಮನೋಜ್ ಕುಮಾರ್ ಅವರು ನಿಮ್ಮ ವಿರುದ್ದ ಹಣ ವಸೂಲಿಗಾಗಿ ಸಲ್ಲಿಸಿದ ದಾವ ಪತ್ರ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅದನ್ನು ಸಾಕ್ಷಿ ಒಪ್ಪಿರುವ ಕಾರಣ ಸದರಿ ದಾಖಲಾತಿಯನ್ನು ನಿಆರ್.1 ಎಂದು ಗುರುತಿಸಲಾಯಿತು. ನಿಆರ್.1 ರ ಶಿರೋನಾಮೆಯಲ್ಲಿ ನಮೂದಿಸಿರುವ ನನಗೆ ಎಂದರೆ ಸರಿ. ಈಗ ತೋರಿಸಿದ ದಾಖಲಾತಿ ಮನೋಜ್ ಕುಮಾರ್ ಅವರು ನಿಮ್ಮ ವಿರುದ್ದ ಹಣ ವಸೂಲಾತಿಗಾಗಿ ಸಲ್ಲಿಸಿದ ಆರ್ಡರ್ ಶೀಟ್ ಎಂದರೆ ಸರಿ. ಅದನ್ನು ಸಾಕ್ಷಿ ಒಪ್ಪಿರುವ ಕಾರಣ ಅದನ್ನು ನಿಆರ್.2 ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲಾತಿ ಆ ದಾವೆಯ ತೀರ್ಪು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅದನ್ನು ನಿಆರ್.3 ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲಾತಿ ಜಾರಿ ಪ್ರಕರಣದ ಆರ್ಡರ್ ಶೀಟ್ ಎಂದರೆ ಸರಿ. ಅದನ್ನು ಸಾಕ್ಷಿ ಒಪ್ಪಿರುವ ಕಾರಣ ಅದನ್ನು ನಿಆರ್.4 ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲಾತಿ ಮನೋಜ್ ಕುಮಾರ್ ಅವರು ನಿಮ್ಮ ವಿರುದ್ದ ಹಣ ವಸೂಲಿಗಾಗಿ ಸಲ್ಲಿಸಿರುವ ಜಾರಿ ಪ್ರಕರಣದ ಅರ್ಜಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ದಾಖಲಾತಿಯನ್ನು ಸಾಕ್ಷಿ ಒಪ್ಪಿರುವ ಕಾರಣ ಅದನ್ನು ನಿಆರ್.5 ಎಂದು ಗುರುತಿಸಲಾಯಿತು. ಮನೋಜ್ ಕುಮಾರ್ ಅವರು ಹಣ ವಸೂಲಾತಿಗಾಗಿ ದಾವೆ ಸಲ್ಲಿಸುವುದಕ್ಕಿಂತ ಮೊದಲು ವಕೀಲರಿಂದ ಕಾನೂನು ತಿಳುವಳಿಕೆ ನೋಟಿಸ್ ಕೊಟ್ಟಿದ್ದರು ಎಂದರೆ ಸಾಕ್ಷಿ ಇಲ್ಲ ಬಂದಿಲ್ಲ ಎಂದು ಉತ್ತರಿಸುತ್ತಾರೆ. ನೀವು ಈ ಪ್ರಕರಣದ ಪ್ರಮಾಣ ಪತ್ರದಲ್ಲಿ ಮನೋಜ್ ಕುಮಾರ್ ಅವರು ಕಳುಹಿಸಿದ ಕಾನೂನು ತಿಳುವಳಿಕೆ ನೋಟೀಸ್ ಅನ್ನು ನಮ್ಮ ತಂದೆ ಸ್ವೀಕರಿಸಿದ್ದರು ನಾನು ಅದನ್ನು ಯಾರೋ ಕಳುಹಿಸಿದ್ದಾರೆ ಎಂದು ನಿರಾಕರಣೆ ಮಾಡಿದ್ದೇನೆ ಎಂದು ಹೇಳಿದ್ದೀರ ಎಂದರೆ ಸಾಕ್ಷಿ ಇಲ್ಲ ಹೇಳಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಮತ್ತು ಮನೋಜ್ ಕುಮಾರ್ ಅವರ ನಡುವೆ ಹಣದ ವ್ಯವಹಾರ ನಡೆದಿರುವ ವಿಚಾರಗಳು ಖುದ್ದಾಗಿ ಗೊತ್ತಿತ್ತು ಆದರು ಹಣ ಕೊಡುವುದಿರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಯಾರೋ ನೋಟಿಸ್ ಕಳುಹಿಸಿದ್ದಾರೆ ಎಂದು ನಿರಾಕರಣೆ (Ignore) ಮಾಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು

ಹೇಳುವಂತೆ ನಿಜವಾಗಲು ಮನೋಜ್ ಕುಮಾರ್ ಅವರಿಂದ ಹಣವನ್ನು ಪಡೆದುಕೊಳ್ಳದೆ ಇದ್ದಿದ್ದಲ್ಲಿ ನಿಮಗೆ ವಿಚಾರ ತಿಳಿದು ಬಂದ 2019 ರಲ್ಲಿಯೇ ಅಪೀಲು ಸಲ್ಲಿಸಿ ಪ್ರಶ್ನೆ ಮಾಡುತ್ತಿದ್ದಿರಿ ಆದರೆ ನೀವು ಅವರಿಗೆ ಹಣ ಕೊಡುವುದನ್ನು ತಪ್ಪಿಸಿಕೊಳ್ಳುವ ದೃಷ್ಟಿಯಿಂದ ವಾಸ್ತವಾಂಶಗಳನ್ನು ಮರೆಮಾಚಿ ಸುಳ್ಳು ಅಪೀಲು ಸಲ್ಲಿಸಿ ಸುಳ್ಳು ಸಾಕ್ಷಾ ನುಡಿಯುತಿದ್ದೀರಿ ಎಂದರೆ ಸಾಕ್ಷಿ 2019 ರಲ್ಲಿಯೇ ರಾಮಚಂದ್ರ.ಎನ್, ಮಂಡ್ಯದ ವಕೀಲರಿಗೆ ದಾಖಲಾತಿಗಳನ್ನು ಕೊಟ್ಟು ಅಪೀಲು ಸಲ್ಲಿಸಲು ತಿಳಿಸಿದ್ದೆ ಅವರು ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. 2019 ರಲ್ಲಿ ಜಾರಿ ಪ್ರಕರಣದಲ್ಲಿ ನೀವು ಏಷ್ಟು ಸಾರಿ ನ್ಯಾಯಾಲಯಕ್ಕೆ ಹಾಜರಾಹಗಿದ್ದಿರಿ ಎಂದರೆ ಸಾಕ್ಷಿ ನಾನು ಬಂದಿಲ್ಲ ವಕೀಲರು ನಾನು ನೋಡಿಕೊಳ್ಳುತ್ತೇನೆ ನೀನು ಬರುವುದು ಬೇಡ ಎಂದು ಹೇಳಿದ್ದರು ಎಂದು ಉತ್ತರಿಸುತ್ತಾರೆ. ನೀವು 12.06.2015 ರಲ್ಲಿಯೇ ಮನೋಜ್ ಅವರಿಂದ ಹಣವನ್ನು ಪಡೆದುಕೊಂಡು ದಾಖಲಾತಿಗಳನ್ನು ಬರೆದುಕೊಟ್ಟಿದ್ದೀರಿ ಸದರಿ ಹಣವನ್ನು ಮರು ಪಾವತಿಸುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಈ ರೀತಿ ಸುಳ್ಳು ಸಾಕ್ಷ್ಯಾ ನುಡಿಯುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಈ ಕೇಸಿಗೋಸ್ಕರ ಸೃಷ್ಟಿ ಮಾಡಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.